ಬರುವ ಜನರಿಂದ ಮಕ್ಕರಿ ಮಕ್ಕರಿಗಳನ್ನು ಪೂರ್ತಿ ತೆಗೆದುಕೊಂಡು ಅವರಿಗೆ ಸರಿಯಾದ ರೇಟು ಕೊಡದೇ ಮೋಸವಾಗುತ್ತಿದೆ ಮತ್ತು ಸರಿಯಾದ ರೀತಿಯಲ್ಲಿ ವ್ಯಾಪಾರ ನಡೆಯುವುದಕ್ಕೆ ಇವರುಗಳು ಅವಕಾಶ ಮಾಡಿಕೊಡುತ್ತಿಲ್ಲ. ಇದರಿಂದಾಗಿ ಇಲ್ಲಿ ಹುಳುಗಳು ಕೆಲವು ಪೇಳೆ ಕೆಟ್ಟುಹೋಗುತ್ತವೆ ಮತ್ತು ಸರ್ಕಾರದ ಪರವಾಗಿ ಇರುವ ಅಧಿಕಾರಿಗಳು ವ್ಯಾಪಾರಕ್ಕೆ ಬರುವ ಬಡ ರೈತರಿಗೆ ಅನುಕೂಲಗಳನ್ನು ಮಾಡಿಕೊಡುತ್ತಿಲ್ಲ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಡಿ. ದೇವರಾಜ ಅರಸ್.—ಇದುವರೆಗೂ ಯಾವ ದೂರುಗಳೂ ಬಂದಿಲ್ಲ. ಮಾನ್ಯ ಸದಸ್ಯರೂ ಕೂಡ ನಮಗೆ ಬರಿದಿಲ್ಲ. ಬೇರೆಯವರಿಂದಲೂ ದೂರುಗಳು ಬಂದಿಲ್ಲ. ಈಗ ಮಾನ್ಯ ಸದಸ್ಯರು ಹೇಳುತ್ತಿರುವುದರಿಂದ ಇದರ ಬಗ್ಗೆ ವಿಚಾರ ಮಾಡಿ ನೋಡಿಸುತ್ತೇನೆ. ಇದುವರೆಗೂ ದೂರುಗಳೇ ಬರದೇ ಇದ್ದರೆ ನಾವೇನುತಾನೇ ಮಾಡಬಹುದು ? ಈಗ ಹೇಳಿದಾ ರೆ. ಇದನ್ನು ನೋಡಿಸುತ್ತೇನೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಗುಂಡ್ಲುಪೇಟೆಯಲ್ಲಿರುವ ಮಾರ್ಕೆಟ್ಟಿಗೆ ರೈತರು ಬೆಳೆದ ಕಕೂನುಗಳನ್ನು ಮಾರಾಟಕ್ಕೆ ತಂದರೆ ಅವರಿಗೆ ಇಲ್ಲಿರುವ ಸರ್ಕಾರದ ಅಧಿಕಾರಿಗಳು ಸಹಾಯ ಮಾಡುತ್ತಿಲ್ಲ. ಅವರು ಹೇಗೋ ಒಂದು ರೀತಿ ಮಾರ್ಕೆಟ್ಟು ನಡೆಸಿಕೊಂಡು ಹೋಗಬೇಕೆಂದು ಒಂದೊಂದು ಕಡೆ ಒಂದೊಂದು ರೀತಿ ಮಾಡುತ್ತಾ ಹೋಗುತ್ತಿದ್ದಾರೆ. ಇದರಿಂದ ವ್ಯಾಪಾರಕ್ಕೆ ಬರುವ ರೈತರಿಗೆ ಬಹಳ ತೊಂದರೆಯಾಗುತ್ತಿದೆ. ರೈತರೂ ಕೂಡ ಇದರಿಂದ ಹಾಳಾಗುತ್ತಿದ್ದಾರೆ. ಇದರ ಬಗ್ಗೆ ಸರ್ಕಾರ ಸೂಕ್ತವಾದ ಕ್ರಮವನ್ನು ತೆಗೆದುಕೊಳ್ಳುತ್ತಾರೆಯೇ ?

ಶ್ರೀ ಡಿ. ದೇವರಾಜ ಅರಸ್.—ಮಾನ್ಯ ಸದಸ್ಯರು ಗುಂಡ್ಲುಪೇಟೆ ಮಾರ್ಕೆಟ್ಟಿನ ವಿಚಾರವನ್ನು ಇಲ್ಲಿ ತಿಳಿಸುತ್ತಿದ್ದಾರೆ. ಇಲ್ಲಿರುವ ಅಧಿಕಾರಿಗಳು ಸರಿಯಾಗಿ ಅನುಕೂಲ ಮಾಡುತ್ತಿಲ್ಲ ಎಂದು ಹೇಳುತ್ತಿದ್ದಾರೆ. ನಮಗೆ ಗೊತ್ತಿರುವಂತೆ ಇಲ್ಲೇನೂ ವ್ಯಾಪಾರ ನಿಂತಿಲ್ಲ. ಈಗ ಹೇಳುತ್ತಿರುವುದರಿಂದ ಇದರ ಬಗ್ಗೆ ವಿಚಾರಣೆ ಮಾಡಿ ಅದರ ಬಗ್ಗೆ ಸಾಧ್ಯವಾದ ಕ್ರಮಗಳನ್ನು ಏನು ತೆಗೆದುಕೊಳ್ಳಬಹುದೋ ಅದನ್ನು ಆ ನಂತರ ವಿಚಾರ ಮಾಡಬಹುದು.

Improvement of S. D. North Channel, Holenarasipur Taluk

370. Sri H. D. DEVE GOWDA (Holenarasipur).—

Will the Minister for Public Works be pleased to state :—

(*a*) whether any report has been received by the State Governmer alleging excess measurement and wrong classification in the work of improvement to S. D. North Channel, Holenarasipur Taluk ;

(*b*) whether orders of Government were passed to hold enquiry by the departmental officers ; if so, when the preliminary enquiry was held ;

(*c*) whether it is not a fact that the Government referred this matter to the Vigilance Commission to conduct a regular enquiry in this matter ;

(*d*) if so, when it was referred to the Vigilance Commission ;

(*e*) whether it has come to notice of the Government that one contractor who was involved in this deal has now given notice to the Department indicating his claim as Rs. 20,000 up to the miles for which the measurement book was lost by the concerned Junior Engineer ;

(*f*) whether the Government would take necessary steps to complete the enquiry before water is allowed in the channel for the next irrigation season ?

878

A.—Sri VEERENDRA PATIL (Minister for Public Works).—

(*a*) Yes.

(*b*) No.

(*c*) The matter has been referred to the Vigilance Commission for a detailed investigation.

(*d*) In the month of August 1967.

(*e*) Yes. A notice has been received by the Department.

(*f*) The matter will be finalised as soon as possible.

10-30 A.M.

ಶ್ರೀ ಎಚ್. ಡಿ. ದೇವೇಗೌಡ.—(ಬ) ಪ್ರಶ್ನೆಯಲ್ಲಿ ಯಾವಾಗ ಪ್ರಿಲಿಮಿನರಿ ಇನ್‌ಕ್ವಾಯರಿ ಮಾಡಿದೆ, ಇದಕ್ಕಾಗಿ ಸರಕಾರಿ ಆರ್ಡರ್ ಆಗಿದೆಯೇ ಎಂದು ಕೇಳಿದ್ದಕ್ಕೆ, ಇಲ್ಲ ಎಂದು ಉತ್ತರ ಹೇಳಿದೆ. ಇದರ ಬಗ್ಗೆ ಎಂಟು ಪ್ಲೀಡರ್ ವರೆಗೆ ಡಿಪಾರ್ಟ್‌ಮೆಂಟಲ್ ಆಫೀಸರರು ಇನ್‌ವೆಸ್ಟಿಗೇಷನ್ ಮಾಡಿ 1,76,000 ರೂಪಾಯಿ ಹಣ ಕೊಡಬೇಕು ಎಂದು ರಿಪೋರ್ಟ್ ಕೊಟ್ಟಿಲ್ಲವೇ ?

†ಶ್ರೀ ವೀರೇಂದ್ರ ಪಾಟೀಲ್.—ಅದು ಇನ್‌ಕ್ವಾಯರಿ ಅಲ್ಲ. ಕಂಪ್ಲೇಂಟ್ ಬಂದಮೇಲೆ ಇದರಲ್ಲಿ ಪ್ರೈಮಾ ಫೇಸೀ ಕೇಸು ಇದೆಯೇ ಎನ್ನುವುದಕ್ಕೆ ರಿಪೋರ್ಟ್ ಮಾಡಿ ಎಂದು ಹೇಳಿದ್ದೆವು. ಇದರಲ್ಲಿ ಪ್ರೈಮಾ ಫೇಸೀ ಕೇಸು ಇರುವುದರಿಂದ ಇದನ್ನು ವಿಜಿಲೆನ್ಸ್ ಕಮಿಷನ್ ಅವರ ಕಡೆ ಹಾಕಿದ್ದೇವೆ.

ಶ್ರೀ ಎಚ್. ಡಿ. ದೇವೇಗೌಡ.—ಇದು ಗಮನಕ್ಕೆ ಬಂದು ಒಂದೂವರೆ ವರ್ಷವಾಯಿತು. ವಿಜಿಲೆನ್ಸ್ ಕಮಿಷನ್‌ಗೆ ಇದನ್ನು ಒಪ್ಪಿಸಿ ಎಂಟು ತಿಂಗಳುಗಳಾಗಿದ್ದರೂ ಕೂಡ ವಿಜಿಲೆನ್ಸ್ ಕಮಿಷನ್ ನಿಂದ ಕಂಟ್ರಾಕ್ಟರನಿಗೆ ನ್ಯಾಯ ದೊರೆಯದೇ ಇರುವುದು ನಿಜವಲ್ಲವೇ ? ಹೆಚ್ಚಿನ ಪೊತ್ತು ಇರತಕ್ಕಂಥ ಸನ್ನಿವೇಶದಲ್ಲಿ ಇನ್‌ವೆಸ್ಟಿಗೇನ್ ಮಾಡಿಸಿ ಸಂಬಂಧಪಟ್ಟ ಅಧಿಕಾರಿಗಳು ಕಂಟ್ರಾಕ್ಟರ್ಸ್ ಮೇಲೆ ಕ್ರಮ ತೆಗೆದುಕೊಳ್ಳುತ್ತಾರೆ ಎಂದು ಆಶ್ವಾಸನೆ ಕೊಡುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ವಿಜಿಲೆನ್ಸ್ ಕಮಿಷನ್ ಇದೆ ಅಧಿಕಾರಿಗಳು ಇದ್ದಾರೆ. ಅವರಿಗೆ ಡೈರೆಕ್ಷನ್ ಕೊಡುವುದಕ್ಕೆ ಬರುತ್ತದೋ ಇಲ್ಲವೋ ಗೊತ್ತಿಲ್ಲ. ಇನ್‌ಕ್ವಾಯರಿ ಮುಗಿಸುವುದಕ್ಕೆ ವಿನಂತಿ ಮಾಡಿಕೊಳ್ಳುತ್ತೇವೆ.

Mr. DEPUTY SPEAKER.—Question Hour is over.

(*Some members stood up and asked the Deputy Speaker to allow them to put supplementaries*).

Sri S. NIJALINGAPPA.—My friends were complaining that sufficient number of question sent by them were not ready. Now they are getting ready and we are getting about 20 questions printed at the request of the Hon'ble members. Now they complain all should be allowed to put supplementaries whether they are important or unimportant. If the members control themselves and put only necessary supplementaries, there would be no trouble and everything will be over within the time. It will be all right if they put the necessary questions. Therefore, I appeal to the members, a few questions which are absolutely necessary may be put.